UASB Library
Newspaper Clippings
04.09.2023 MONDAY Pg .1
Jai Kisan

ರೈತರ ಸಬಲೀಕರಣಕ್ಕೆ ಯತ್ನ

Samyuktha Karnataka Pg.02

ಸಂ.ಕ.ಸಮಾಚಾರ, ನಂದಗುಡಿ

ರೈತ ಕುಟುಂಬಗಳನ್ನು ಆರ್ಥಿಕವಾಗಿ ಸಬಲರನ್ನಾಗಿ ಮಾಡಲು ಪ್ರಯತ್ನ ಮಾಡುತ್ತಿವೆ. ಸತತ ರೈತರ ಸೇವೆಯಲ್ಲಿ ತೊಡಗಿರುವ ನಮ್ಮ ಬ್ಯಾಂಕ್ ಲಾಭಗಳಿಸುವುದರಲ್ಲಿ ಮುಂದಿದೆ ಎಂದು ರೇಷ್ಮೆ ಬೆಳೆಗಾರರ ಹಾಗೂ ರೈತರ ಸೇವಾ ಸಹಕಾರ ಸಂಘದ ಅಧ್ಯಕ್ಷ ಎಸ್.ಮಂಜುನಾಥ್ ಹೇಳಿದರು.

ನಂದಗುಡಿ ಹೋಬಳಿಯ ನೆಲವಾಗಿಲು ಗ್ರಾಮದಲ್ಲಿರುವ ಭಾನುವಾರ ನಡೆದ ರೇಷ್ಮೆ ಬೆಳೆಗಾರರ ಹಾಗೂ ರೈತರ ಸೇವಾ ಸಹಕಾರ ಸಂಘದ 2022–23ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಾಹಾ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕರಾದ ಬಿ.ವಿ.ರಾಜಶೇಖರಗೌಡ, ಮಾತನಾಡಿದರು. ಹೊಸಕೋಟೆ ಟಿಎಪಿಸಿಎಂಸಿ ನಿರ್ದೇಶಕ ಎನ್.ಡಿ.ರಮೇಶ್, ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹೆಚ್.ಎಂ.ಗುರುದೇವ್ ಮಾತನಾಡಿದರು.

ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕರಾದ ಬಿ.ವಿ.ರಾಜಶೇಖರಗೌಡ, ಹೊಸಕೋಟೆ ಟಿಎಪಿಎಂಸಿ ಉಪಾಧ್ಯಕ್ಷ ಆರ್.ರವೀಂದ್ರ, ಸಂಘದ ಉಪಾಧ್ಯಕ್ಷರಾದ ಎಸ್.ಕೆ.ರಾಜೇಶ್, ನಿರ್ದೇಶಕರುಗಳಾದ ಎಚ್.ಕೆ.ನಾರಾಯಣಗೌಡ, ಎಂ.ಡಿ.ರಮೇಶ್, ಎನ್.ಮಂಜುನಾಥ್, ರವಿಶಂಕರ್, ಕೆ.ಮಂಜುನಾಥ್, ಜಯಮ್ಮ ಶ್ರೀ ಲಕ್ಷ್ಮೀದೇವಿ ಇತರರಿದ್ದರು., ಟಿ.ಮುನಿರಾಜು, ಎ.ಆರ್.ಕೃಷ್ಣಪ್ಪ, ತಾಪಂ ಮಾಜಿ ಸದಸ್ಯ ಆರ್.ಬೀರಪ್ಪ, ಎಸ್.ಎಫ್.ಸಿ.ಎಸ್‌ನ ಮಾಜಿ ಅಧ್ಯಕ್ಷರಾದ ವಿಜಯದೇವ್ ಇತರರಿದ್ದರು.



ಭಾನುವಾರ ನಡೆದ ರೇಷ್ಮೆ ಬೆಳೆಗಾರರ ಹಾಗೂ ರೈತರ ಸೇವಾ ಸಹಕಾರ ಸಂಘದ 2022–23ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಾಹಾ ಸಭೆಯಲ್ಲಿ ಸಂಘದ ಅಧ್ಯಕ್ಷ ಎಸ್.ಮಂಜುನಾಥ್ ಮಾತನಾಡಿದರು.

Hosadigantha Pg.08

ಹುಬ್ಬೆ ಮಳೆಗೆ ತಂಪಾದ ರೇಷ್ಮೆನಾಡು

ಬಿಸಿಲಿನ ತಾಪಕ್ಕೆ ಒಣಗುತ್ತಿರುವ ಬೆಳೆಗೆ ಜೀವದಾನ: ಶೇ.36ರಷ್ಟು ಬಿತ್ತನೆ

ಬಿತ್ತನೆ ಕಾರ್ಯಕ್ಕೆ ಮಳೆ ಸಹಕಾರಿಯಲ್ಲ

ಗುರುವಾರ ಮತ್ತು ಶುಕ್ರವಾರ ರಾತ್ರಿ ಉತ್ತಮ ಮಳೆ ಸುರಿದಿದೆಯಾದರೂ, ಬಿತ್ತನೆ ಅವಧಿ ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ ಬಿತ್ತನೆ ಚಟುವಟಿಕೆಗೆ ಸಹಕಾರಿಯಾಗುವುದಿಲ್ಲ. ಈಗಾಗಲೇ ಮೊದಲು ಉಳುಮೆ ಮಾಡಿ ಭೂಮಿ ಹದಗೊಳಿಸಿರುವವರು ಬಿತ್ತನೆ ಮಾಡಬಹುದು. ಹೊಸದಾಗಿ ಜೋಳ ಉಳುಮೆ ಮಾಡುವವರು ಬಿತ್ತನೆ ಮಾಡಲು ಸಾಧ್ಯವಾಗುವುದಿಲ್ಲ ಎಂದು ರೈತ ಅಂಜನಾಪುರದ ಸುರೇಶ್, ಜಯಶಂಕರ್ ಹೇಳಿದರು.



ದಿಗಂತ ವಿಶೇಷ

ಮಾಗಡಿಯಲ್ಲಿ ಹೆಚ್ಚು ಮಳೆ

ಜಿಲ್ಲೆಯ 5 ತಾಲೂಕುಗಳ ಪೈಕಿ ಮಾಗಡಿ ತಾಲೂಕಿಗೆ ಹೆಚ್ಚು ಮಳೆಯಾಗಿದೆ. ಮಾಗಡಿ ತಾಲೂಕಿನ ವಾಡಿಕೆ ಮಳೆ 6 ಮಿಮೀ ಇತ್ತು. ಗುರುವಾರ ರಾತ್ರಿ 58.4 ಮಿಮೀ ಮಳೆ (ಶೇ.873 ರಷ್ಟು ಹೆಚ್ಚು) ಸುರಿದಿದೆ. ಇನ್ನು ಚನ್ನಪಟ್ಟಣ ತಾಲೂಕಿಗೆ 7.9 ಮಿಮೀ ವಾಡಿಕೆ ಮಳೆಯಿದ್ದು, 52.9 ಮಿಮೀ ಮಳೆಯಾಗಿದೆ. (ಶೇ.570 ರಷ್ಟು ಹೆಚ್ಚು). ರಾಮನಗರ ತಾಲೂಕಿಗೆ 8.3 ಮಿಮೀ ವಾಡಿಕೆ ಮಳೆ ಇದ್ದು, 40.1 ಮಿಮೀ ಮಳೆಯಾಗಿದೆ. (ಶೇ.383 ರಷ್ಟು ಹೆಚ್ಚು), ಕನಕಪುರ ತಾಲೂಕಿಗೆ ಶೇ.3.8ಮಿಮೀ ವಾಡಿಕೆ ಮಳೆ ಇದ್ದು 30.4 ಮಿಮೀ ಮಳೆಯಾಗಿದ್ದು(ಶೇ.700 ರಷ್ಟು ಹೆಚ್ಚು), ಹಾರೋಹಳ್ಳಿ ತಾಲೂಕಿನಲ್ಲಿ ಶೇ.5.5 ಮಿಮೀ ವಾಡಿಕೆ ಮಳೆಯಿದ್ದು 43.1 ಮಿಮೀ ಮಳೆ ಸುರಿದಿದೆ(ಶೇ.684 ರಷ್ಟು ಹೆಚ್ಚು).

◆ ಬೆಂಕಿ ಮಹದೇವ

ರಾಮನಗರ: ಕಳೆದೊಂದು ತಿಂಗಳಿಂದ ಬಿಸಿಲ ಬೇಗೆಯಿಂದ ಬಸವಳಿದಿದ್ದ ಜಿಲ್ಲೆಯ ನೆಲವನ್ನು ಗುರುವಾರ ರಾತ್ರಿ ಸುರಿದ ಮಳೆ ತಂಪಾಗಿಸಿದೆ. ಜಿಲ್ಲೆಯಲ್ಲಿ ಅಲ್ಪ ಸ್ವಲ್ಪ ಪ್ರಮಾಣದಲ್ಲಿ ಬಿತ್ತನೆ ಮಾಡಿದ್ದ ರೈತರ ಮೊಗದಲ್ಲಿ ಕೊಂಚ ನಿರಾಳ ಭಾವ ಮೂಡಿಸಿದೆ.

ಗುರುವಾರ ರಾತ್ರಿ ಜಿಲ್ಲಾದ್ಯಂತ ಉತ್ತಮ ಮಳೆಯಾಗಿದೆ. ಬಿಸಿಲಿನ ತೀವ್ರತೆಯಿಂದ ಕಂಗಾಲಾಗಿದ್ದ ಜನತೆಗೆ ಮಳೆಯಿಂದಾಗಿ ತಂಪೆನಿಸಿದೆ. ಇನ್ನು ಜಿಲ್ಲೆಯಲ್ಲಿ ಶೇ.36 ರಷ್ಟು ಬಿತ್ತನೆ ನಡೆದಿದೆ. ಸುರಿದ ಮಳೆಯಿಂದಾಗಿ ಒಣಗುತ್ತಿದ್ದ ಪೈರುಗಳಿಗೆ ಜೀವ ಬಂದಂತಾಗಿದೆ.

44 ಮಿಮೀ ಮಳೆ: ಗುರುವಾರ ರಾತ್ರಿ ಜಿಲ್ಲೆಯ ನಾಲ್ಕು ತಾಲೂಕುಗಳಲ್ಲಿ ಉತ್ತಮ ಮಳೆಯಾಗಿದ್ದು, ವಾಡಿಕೆ ಮಳೆಗಿಂತ ಶೇ.723 ರಷ್ಟು ಹೆಚ್ಚು ಮಳೆ ಸುರಿದಿದೆ. ಕಳೆದ 50 ವರ್ಷದ ಮಳೆ ಪ್ರಮಾಣವನ್ನು ಗಣನೆ ಮಾಡಿ ಆ.31 ರಂದು ಜಿಲ್ಲೆಯಲ್ಲಿ 5 ಮಿಮೀ ನಷ್ಟು ಮಳೆ ಬರುತ್ತದೆ ಎಂದು ಅಂದಾಜಿಸಲಾಗಿತ್ತು. ಆದರೆ, ಗುರುವಾರ ರಾತ್ರಿ 44 ಮಿಮೀ ನಷ್ಟು ಮಳೆ ಸುರಿದಿದೆ. ವಾಡಿಕೆಗಿಂತ ಹೆಚ್ಚು ಮಳೆ ಸುರಿದ ಹಿನ್ನೆಲೆಯಲ್ಲಿ ಬಿಸಿಲ ಝಳದಿಂದ ಬಣಗುಡುತ್ತಿದ್ದ ಭೂಮಿ ಇದೀಗ ಮೆದುವಾಗಿದೆ. ಗುರುವಾರ ಇಡೀ ದಿನ ಬಿಸಿಲಿನ ತೀವ್ರತೆ ಹೆಚ್ಚಿದೆ. 32 ಡಿಗ್ರಿ ಸೆಂ. ನಿಂದ 36 ಡಿಗ್ರಿ ಸೆಂ.ವರಗೆ ಇತ್ತು. ಈ ತಾಪಮಾನ ಬೇಸಿಗೆ ಮಟ್ಟ ತಲುಪಿತ್ತು.

ಮಳೆ ಮುಂದುವರೆಯುವ ಸಾಧ್ಯತೆ: ಜಿಲ್ಲೆ ಯಾದ್ಯಂತ ಹುಬ್ಬೆ ಉತ್ತಮ ವರ್ಷಾರಂಭ ಮಾಡಿದೆ. ಇದರಿಂದಾಗಿ ಅಲ್ಪ ಸ್ವಲ್ಪ ಪ್ರಮಾಣದಲ್ಲಿ ಬಿತ್ತನೆಯಾಗಿರುವ ಪೈರುಗಳಿಗೆ ಗುಟುಕು ಜೀವ ಬಂದಂತಾಗಿದೆ. ಬಿತ್ತನೆ ಮಾಡಿರುವ ರೈತರು ಮುಂದಿನ ಕಾರ್ಯಾರಂಭಿಸಿದ್ದಾರೆ.

ಬಿತ್ತನೆ ಸಾಧ್ಯವಿಲ್ಲ: ಈಗಾಗಲೇ ಜಿಲ್ಲೆಯಲ್ಲಿ ಶೇ.70 ರಷ್ಟು ರೈತರು ಇನ್ನೂ ಭೂಮಿಯನ್ನು ಬಿತ್ತನೆಗೆ ಹದಗೊಳಿಸದ ಹಿನ್ನೆಲೆಯಲ್ಲಿ ಇದೀಗ ಹದಗೊಳಿಸಿ ಬಿತ್ತನೆ ಮಾಡಿದರೆ ಬೆಳೆ ಫಲ ಕೊಡುವ ಸಮಯಕ್ಕೆ ಮಳೆಗಾಲ ಮುಗಿದು ನೀರಿನ ಕೊರತೆ ಎದುರಾಗುವ ಕಾರಣ ಬಿತ್ತನೆ ಕಾರ್ಯಕ್ಕೆ ಈ ಮಳೆ ಯಾವುದಕ್ಕೂ ಸಹಕಾರ ವಾಗುವುದಿಲ್ಲ.

3,433 ಹೆಕ್ಟೇರ್ ಕೃಷಿ ಪ್ರದೇಶಕ್ಕೆ ನೀರು

ರಾಮನಗರ: ಎರಡು ದಶಕದಿಂದ ನೆನೆಗುದಿಗೆ ಬಿದ್ದಿರುವ ಮಂಚನಬೆಲೆ ಎಡ ಮತ್ತು ಬಲದಂಡೆ ನಾಲೆಗಳ ಮೂಲಕ ಸುಮಾರು 2,433 ಹೆಕ್ಟೇರ್ ರೈತರ ಕೃಷಿ ಪ್ರದೇಶಕ್ಕೆ ನೀರುಣಿಸುವ ಯೋಜನೆಗೆ ಮರುಜೀವ ತುಂಬಲಾಗುತ್ತಿದೆ ಎಂದು ಶಾಸಕ ಎಚ್.ಎ. ಇಕ್ಬಾಲ್‌ಹುಸೇನ್ ಹೇಳಿದರು.

ಮಂಚನಬೆಲೆ ಜಲಾಶಯ ಹಾಗೂ ನಾಲೆಯನ್ನು ಅಧಿಕಾರಿಗಳು, ಮುಖಂಡರ ಜತೆ ವೀಕ್ಷಣೆ ಮಾಡಿದ ನಂತರ

ಜಲಾಶಯದ ಬಳಿ ಸುದ್ದಿಗಾರರೊಂದಿಗೆ ಮಾತನಾಡಿ, ನಾನು ರೈತಾಪಿ ವರ್ಗದಿಂದ ಬಂದವನು. ಕೃಷಿ ಮಾಡುವವರಿಗೆ

ಹೆಗಲುಕೊಟ್ಟು ಅವರ ನೆರವಿಗೆ ನಿಲ್ಲುವ ಮೂಲಕ ಅವರ ಬದುಕನ್ನು ಹಸನು ಮಾಡುವುದು ನನ್ನ ಕರ್ತವ್ಯವಾಗಿದೆ ಎಂದರು. ರೈತರ ಹಿತ ಕಾಯುವುದೇ ನನಗೆ ಬಹಳ ಮುಖ್ಯವಾಗಿದೆ. ಬಲದಂಡೆ ನಾಲೆ ಮೂಲಕ 1313ಎಕರೆ, ಎಡದಂಡೆ ನಾಲೆ ಮೂಲಕ 1120 ಎಕರೆ ಆಚ್ಚುಕಟ್ಟು ಪ್ರದೇಶಕ್ಕೆ ನೀರು ಹಾಯಿಸುವ ಕೆಲಸಕ್ಕೆ ಪ್ರಾಮಾಣಿಕ ಪ್ರಯತ್ನ ಪಡುತ್ತಿದ್ದೇನೆ. ಈಗ ಎರಡು ದಂಡೆಯನ್ನು ವೀಕ್ಷಣೆ ಮಾಡಿದ್ದೇನೆ. ಎಂದರು.

ಎರಡು ಕಡೆಯ ನಾಲೆಗಳ ನಿರ್ಮಾಣ ಮಾಡಿ ಸುಮಾರು 25 ವರ್ಷ ಕಳೆದಿವೆ. ಅಂದಿನಿಂದ ಕೆಲವು ಚುನಾಯಿತ ಪ್ರತಿನಿಧಿಗಳ ಇಚ್ಛಾಶಕ್ತಿಯ ಕೊರತೆಯಿಂದ ನೂರಾರು ರೈತರ ಭೂಮಿಗೆ ನೀರುಣಿಸಲು ಸಾಧ್ಯವಾಗಿಲ್ಲ,



ಜಲಾಶಯದಲ್ಲಿನ ಒಟ್ಟು 34 ಕಿ.ಮೀ ದುರಸ್ತಿ, ಒತ್ತುವರಿ, ಶಿಥಿಲಾವಸ್ಥೆ, ಹೂಳು ತುಂಬಿರುವ, ಬಂಡೆ ಬಿದ್ದಿರುವ ಕೆಲಸಗಳು ಆಗಬೇಕಿದೆ. ಈಗಾಗಲೇ 10 ಕಿ.ಮೀ ದೂರ ಪಾಲೆ ಶುದ್ಧಿ ಮಾಡುವ ಕೆಲಸ ನಡೆಯುತ್ತಿದೆ.

■ ಎಚ್.ಎ. ಇಕ್ಬಾಲ್‌ಹುಸೇನ್, ಶಾಸಕ

ಅದನ್ನು ಶುದ್ದೀಕರಣ ಮಾಡದಿದ್ದರೆ ಅದು ಮೂಲವನ್ನೇ ಕಳೆದುಕೊಳ್ಳಲಿದೆ. ಅದನ್ನು ಗಮನದಲ್ಲಿರಿಸಿಕೊಂಡು ನಾಲೆಗಳ ದುರಸ್ತಿ ಕಾರ್ಯಾರಂಭ ಮಾಡಿದ್ದೇವೆ. ಎಲ್ಲಾ ಕೆಲಸ ಮುಗಿಸಿ ನಾಲೆಗೆ ನೀರು ಹರಿಸಲಾಗುತ್ತದೆಂದು ಹೇಳಿದರು. ಕೃಷಿ ವಿಚಾರ ಬಂದಾಗ ಎಷ್ಟೆ ಹಣ ವಿರ್ಚಾದರೂ ಸರಿ. ನೀರು ಹಾಯಿಸಲೇಬೇಕು ಎಂದು ಪಣ ತೊಟ್ಟಿದ್ದೇವೆ. ಇದು ನಮ್ಮ ನಾಯಕರಾದಡಿ.ಕೆ.ಶಿವಕುಮಾರ್, ಡಿ.ಕೆ. ಸುರೇಶ್ ಹಾಗು ನನ್ನ ಕನಸು. ಇನ್ನೂ ಮೂರು ತಿಂಗಳ ಒಳಗೆ ನೀರು ಹರಿಸುವ ಕೆಲಸ ಮಾಡಲಾಗುತ್ತದೆ ಎಂದರು. ಮಾಜಿ ಶಾಸಕ ಕೆ.ರಾಜು, ಕೆಎಂಎಫ್ ಮಾಜಿ ಅಧ್ಯಕ್ಷ ಪಿ.ನಾಗರಾಜು, ಬಿಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಎರೇಹಳ್ಳಿ ಮಂಜು ಇತರರಿದ್ದರು.

• ವಿಜಯಕುಮಾರ ಹಿರೇಮಠ.
ಉಜಿರೆ

ಡಬ್ಬಲ್ ಡಿಗ್ರಿ ಪಡೆದಾಕೆಯ ಕೃಷಿ ಕಾಯಕ



ಸಾಮಾನ್ಯವಾಗಿ ಕೆಲವರಿಗೆ ವೃತ್ತಿಗಿಂತ ಪ್ರವೃತ್ತಿಯೇ ಹೆಚ್ಚಿನ ಸಂತೋಷ ನೀಡುತ್ತದೆ. ಅದೇ ರೀತಿಯಲ್ಲಿ ಇವರು ಶಿಕ್ಷಕಿ ಆಗಬೇಕೆಂಬ ಕನಸು ಹೊತ್ತವರು. ತಮ್ಮ ಉನ್ನತ ವ್ಯಾಸಂಗವನ್ನು ಪೂರೈಸಿ ಶಿಕ್ಷಕಿಯಾಗಿ ಸೇವೆಯನ್ನು ನಿರ್ವಹಿಸಿ, ನಂತರ ವೃತ್ತಿಗೆ ಪೂರ್ಣರಾಮ ನೀಡಿದ್ದಾರೆ. ಸದ್ಯ ತರಕಾರಿಗಳ ಖರೀದಿಗೆ ಪೇಟೆಗಳ ಮೇಲೆ ಅವಲಂಬನೆಯಾಗೋ ಇಂದಿನ ದಿನಮಾನಗಳಲ್ಲಿ ಇವರು ತಮ್ಮ ಮನೆಯಲ್ಲೇ ತರಕಾರಿಗಳನ್ನು ಬೆಳೆದು ಮನೆಯ ದೈನಂದಿನ ಖರ್ಚನ್ನು ಕಡಿಮೆ ಮಾಡಿದ್ದಾರೆ.

ಬಾಲ್ಯದಿಂದಲೇ ಸ್ವರ್ಣಶ್ರೀ ಅವರಿಗೆ ಕೃಷಿಯಲ್ಲಿ ಆಸಕ್ತಿ. ಮೂಲತಃ ಪುತ್ತೂರು ತಾಲೂಕಿನ ಬಡಗನ್ನೂರು ಗ್ರಾಮದ ಪಟ್ಟೆ ನಿವಾಸಿಯಾದ ಈಕೆ, ಬಿಬಿಎಂ, ಎಮ್ ಎಂ. ಎಡ್, ಜತೆಗೆ ಎಲ್ ಎಲ್ ಬಿ ಪದವೀಧರೆ. ಒಂದು ವರ್ಷದ ಕಾಲ ಸರಕಾರಿ ಶಾಲೆ ಮತ್ತು ಕಾಲೇಜಿನಲ್ಲಿ ಶಿಕ್ಷಕಿಯಾಗಿ ಸೇವೆ ಸಲ್ಲಿಸಿದ್ದಾರೆ. ನಂತರದ ದಿನಗಳಲ್ಲಿ ತಮ್ಮ ಮಗನ ಓದಿನ ಭವಿಷ್ಯಕ್ಕಾಗಿ ವೃತ್ತಿಗೆ ವಿದಾಯ ಹೇಳಿ, ಈಗ ತರಕಾರಿ ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಶಿಕ್ಷಕ ವೃತ್ತಿಯ ದಿನಗಳಲ್ಲಿ ಕೃಷಿಯಲ್ಲಿ ಕೆಲವೊಮ್ಮೆ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು. ನಂತರ ವೃತ್ತಿಗೆ ಪೂರ್ಣ ರಾಮ ಹೇಳಿ ತಮ್ಮ ಮನೆಯ ಬಳಕೆಗೆ ಬೇಕಾಗುವಂತಹ ತರಕಾರಿಗಳನ್ನು, ಹೆಚ್ಚಿನ ಆಸಕ್ತಿಯಿಂದ ಬೆಳೆಯತೊಡಗಿದರು. ಮನೆಯ ಖರ್ಚು ಉಳಿತಾಯ ಮಾಡುವ ಉದ್ದೇಶವೂ ಇದರ ಹಿಂದಿದೆ.



ವಿವಿಧ ತರಕಾರಿಗಳಾದ ಬದನೆಕಾಯಿ, ಸೋರೆಕಾಯಿ, ಉಡುಪಿ ಗುಳ್ಳ ಬದನೆ, ಮುಳ್ಳು ಸೌತೆ, ಹೀರೇಕಾಯಿ ಮತ್ತು ತೊಂಡೆಕಾಯಿ ಹೀಗೆ ಹತ್ತು ಹಲವು ರೀತಿಯ ತರಕಾರಿಗಳನ್ನು ಹವಾಮಾನಕ್ಕೆ ಅನುಗುಣವಾಗಿ ಬೆಳೆಯುತ್ತಿದ್ದಾರೆ. ಸಾಮಾನ್ಯವಾಗಿ ತೊಂಡೆಕಾಯಿ ಬಳ್ಳಿಗೆ ಚಪ್ಪರ ನಿರ್ಮಿಸಿ, ಹಬ್ಬುವ ತರಹ ಮಾಡುವುದು ಸಹಜ. ಆದರೆ ಇವರು ಒಂದು ವಿಶಿಷ್ಟ ಪ್ರಯೋಗದಿಂದ ಮೂರು ಕಂಬಗಳನ್ನು ನೆಟ್ಟು, ಅದಕ್ಕೆ ಬಲೆಯ ಹೊದಿಕೆ ಹಾಕಿ, ಬಳ್ಳಿ ಮೇಲೆ ಹಬ್ಬಲು ಸಹಾಯ ಮಾಡಿದ್ದಾರೆ. ಸಂಪೂರ್ಣವಾಗಿ ತರಕಾರಿ ಕೃಷಿಗೆ ಸಾವಯವ ಗೊಬ್ಬರ ಬಳಕೆ ಮಾಡುತ್ತಿದ್ದಾರೆ. ತರಕಾರಿ ಬೀಜಗಳನ್ನು ಅಂಗಡಿಯಿಂದ ಖರೀದಿಸದೆ, ಸ್ವತಃ ತಾವೇ ಬೀಜಗಳನ್ನ ಸಂಗ್ರಹಿಸಿ ಸಸಿಗಳನ್ನು ಬೆಳೆಸಿ ಆರೈಕೆ ಮಾಡುತ್ತಾರೆ. ಉತ್ತಮ ದಿನವನ್ನು (ವಿಶೇಷವಾಗಿ ಬುಧವಾರ ಮತ್ತು ಶನಿವಾರ) ನೋಡಿಕೊಂಡು ಬೀಜವನ್ನು ಬಿತ್ತನೆ ಮಾಡಿದಾಗ, ಇನ್ನು ಹೆಚ್ಚಿನ ಒಳ್ಳೆಯ ಫಸಲನ್ನು ಕಾಣಬಹುದು ಎನ್ನುವುದು ಅಭಿಪ್ರಾಯ.

ಇದರ ಜತೆಗೆ ತೋಟದಲ್ಲಿ ಅಡಿಕೆ, ಕಾಳುಮೆಣಸು, ಜೇನುಸಾಕಾಣಿಕೆ ಮತ್ತು ಮೀನು ಸಾಕಾಣಿಕೆಯನ್ನು ಮಾಡುತ್ತಿದ್ದಾರೆ. ಇದರಿಂದ ಸಿಗುವ ಅಡಿಕೆ ಸಿಪ್ಪೆಯನ್ನು ಗೊಬ್ಬರವನ್ನಾಗಿ ಮಾಡಿಕೊಂಡು ಮತ್ತು ಮೀನಿನ ನೀರನ್ನು ತೋಟ ಮತ್ತು ತರಕಾರಿ ಗಿಡಗಳಿಗೆ ಹಾಯಿಸುತ್ತಿದ್ದಾರೆ. ಹೀಗೆ ವೈಜ್ಞಾನಿಕ ರೀತಿಯ ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ.



Vishwavani
Pg.Spl 3

ಪರಿಸರ ಕಾರಣಕ್ಕೆ ಕುಲಾಂತರಿ ಸಾಸಿವೆ ಪರೀಕ್ಷೆಗೆ ಸುಪ್ರೀಂ ರೆಡ್‌ಸಿಗ್ನಲ್

ಸಾಸಿವೆಗೇ ಕುಲಾಂತರಿಯ ಒಗ್ಗರಣೆ

■ ಶಶಿಧರ್ ಎಸ್.ದೋಣಿಹಕ್ಲು ತುಮಕೂರು
shashidara.ds@timesgroup.com

ಪರಿಸರ ಸಂರಕ್ಷಣೆ ಉದ್ದೇಶದಿಂದ ಸುಪ್ರೀಂಕೋರ್ಟ್ ಕುಲಾಂತರಿ ಸಾಸಿವೆ ಪರೀಕ್ಷೆ ಬೇಡ ಎಂದು ಕೇಂದ್ರ ಸರಕಾರಕ್ಕೆ ಸೂಚಿಸಿದೆ. ಇದರೊಂದಿಗೆ 'ಸಾಸಿವೆ ಕಥೆ' ಮತ್ತೆ ಮುನ್ನೆಲೆಗೆ ಬಂದಿದೆ.

ಕುಲಾಂತರಿ ತಳಿ ಪರಿಶೀಲನಾ ಸಮಿತಿಯ ಶಿಫಾರಸಿನಂತೆ ಸಾಸಿವೆ ತಳಿ ಡಿಎಂಎಚ್-11 ಪರೀಕ್ಷೆಗೆ ಒಳಪಡಿಸಲು ಕೇಂದ್ರ ಅನುಮೋದನೆ ನೀಡಿದ್ದನ್ನು ಅರುಣಾ ರಾಡ್ರಿಗಸ್ ಪ್ರಶ್ನಿಸಿ ನ್ಯಾಯಾಲದ ಮೊರೆ ಹೋಗಿದ್ದರು. ಅರ್ಜಿ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ಪರಿಸರಕ್ಕೆ ಒಮ್ಮೆ ಹಾನಿಯಾದರೆ ಅದನ್ನು ಪುನಃ ಸರಿಪಡಿಸಲು ಆಗುವುದಿಲ್ಲ ಎಂದು ಅಭಿಪ್ರಾಯಿಸಿ 'ಕುಲಾಂತರಿ ಸಾಸಿವೆ ಪರೀಕ್ಷೆಗೆ' ರೆಡ್‌ಸಿಗ್ನಲ್ ನೀಡಿದೆ.

ಆತ್ಮನಿರ್ಭರ ಭಾರತ ಯೋಜನೆಯಲ್ಲಿ ಎಣ್ಣೆ ಬೀಜಗಳ ಉತ್ಪಾದನೆ ಹೆಚ್ಚಿಸುವ ಕಾರಣಕ್ಕೆ ಸಾಸಿವೆ ಉತ್ಪಾದನೆ ಹೆಚ್ಚಳಕ್ಕೆ ಕುಲಾಂತರಿ ಪ್ರಬಲ ಮದ್ದು. ಕಡಿಮೆ ಪ್ರದೇಶ ಮತ್ತು ಕಡಿಮೆ ವೆಚ್ಚದಲ್ಲಿ ಹೆಚ್ಚು ಉತ್ಪಾದನೆ ಸಾಧ್ಯ ಎಂಬುದು ಪ್ರಬಲ ವಾದ.

''ಕಳೆ ನಾಶಕಗಳನ್ನು ಸಿಂಪಡಿಸಿದಾಗ ಬೆಳೆಗೆ ನಷ್ಟ ಉಂಟಾಗುತ್ತದೆ. ಆದರೆ, ಕುಲಾಂತರಿ ಸಾಸಿವೆ ಬೆಳೆ ನಡುವಿನ ಕಳೆಗಳಿಗೆ ಕಳೆನಾಶಕ ಸಿಂಪಡಿಸಿದಾಗ ಬೆಳೆಗೆ ಯಾವುದೇ ಸಮಸ್ಯೆ ಆಗುವುದಿಲ್ಲ ಕೇವಲ ಹೆಚ್ಚು ಇಳುವರಿಯಲ್ಲದೇ ಗುಣಮಟ್ಟ ಉತ್ತಮ ವಾಗಿರುತ್ತದೆ,'' ಎಂದು ಕುಲಾಂತರಿ ಸಾಸಿವೆ ಪರ ತಜ್ಞರು ಅಭಿಪ್ರಾಯ ಮಂಡಿಸುತ್ತಿದ್ದಾರೆ.



ವಿರೋಧ ವಾದ: ''ಶಾಸನಬದ್ಧ ಪ್ರಯೋಗ ಮಾಡದೆ ಕುಲಾಂತರಿ ಸಾಸಿವೆಗೆ ಅಂಕಿತ ನೀಡಲಾಗಿದ್ದು, ಇದು ಜೀವವೈವಿಧ್ಯತೆ ಕಾಯಿದೆಯ ಉಲ್ಲಂಘನೆ,'' ಎನ್ನುತ್ತಾರೆ ಪರಿಸರ, ಕೃಷಿ ತಜ್ಞರು. ಕುಲಾಂತರಿ ಸಾಸಿವೆಯಲ್ಲಿ ದೇಸೀ ತಂತ್ರಜ್ಞಾನ ಬಳಸಲಾಗಿದೆ ಹಾಗೂ ಆಯ್ದ ದೇಸಿ ತಳಿಗಳಿಗಿಂತ ಶೇ.23ಕ್ಕಿಂತ ಹೆಚ್ಚು ಇಳುವರಿ ಕೊಡುತ್ತದೆ ಎಂಬುದು ಸತ್ಯವಲ್ಲ,'' ಎಂಬುದು ಕುಲಾಂತರಿ ವಿರೋಧಿಗಳ ಸ್ಪಷ್ಟ ವಾದ. ''ಕಳೆನಾಶಕಗಳು ಕ್ಯಾನ್ಸರ್‌ಕಾರಕ ಅಂಶಗಳನ್ನು ಹೊಂದಿದ್ದು ಮಾನವ ಮತ್ತು ಪ್ರಾಣಿಗಳ ದೇಹದಲ್ಲಿರುವ ಕೋಶಗಳಿಗೆ ಅಪಾಯಕಾರಿ,'' ಎನ್ನುತ್ತಾರೆ ತಜ್ಞರು.

ಸಾಸಿವೆ ಬಲು ಭಾರ!

- ಸಾಸಿವೆಯಲ್ಲಿ ಆರೋಗ್ಯಕರ ಅಂಶಗಳಿವೆ.
- ರಕ್ತದಲ್ಲಿ ಕೊಲೆಸ್ಟ್ರಾಲ್ ಅಂಶಗಳನ್ನು ತಗ್ಗಿಸಲು ಮತ್ತು ಹೃದಯ ಕಾಯಿಲೆ ತಡೆಯುವ ಗುಣವಿದೆ.
- ಚರ್ಮ ತಿಳಿಗೊಳಿಸುವಲ್ಲಿ ಕೂದಲಿನ ಆರೋಗ್ಯಕ್ಕೆ ಹಾಗೂ ಮಧುಮೇಹ ಕಡಿವಾಣಕ್ಕೆ ಸಹಕಾರಿ.
- ಸಾಸಿವೆ ಗಿಡ ಹೊರಸೂಸುವ ಆಲೆಲೋಪಥಿಕ್ ಆಂಶ ನಾನಾ ಕಳೆಗಳನ್ನು ನಿಯಂತ್ರಿಸುವ ಕ್ಷಮತೆ ಹೊಂದಿದ್ದು ಮಳೆಯಾಶ್ರಿತ ಪ್ರದೇಶದಲ್ಲಿ ಕಳೆ ನಿಯಂತ್ರಣಕ್ಕೆ ವಿಶೇಷ ಬೆಳೆಯಾಗುತ್ತದೆ.
- ಕೃಷಿ ಬೆಳೆಗಳಲ್ಲಿ ಪರಾಗಸ್ಪರ್ಶ ಪ್ರಕ್ರಿಯೆಯಲ್ಲಿ ಜೇನುನೊಣಗಳನ್ನು ಆಕರ್ಷಿಸಿ ಉತ್ತಮ ಇಳುವರಿಗೆ ಪಾತ್ರ ವಹಿಸುತ್ತದೆ.
- ದೇಶದಲ್ಲಿ 34 ಲಕ್ಷ ಜೇನು ಸಾಕಣೆ ಕುಟುಂಬಗಳ ಪೈಕಿ 27.2 ಲಕ್ಷ ಕುಟುಂಬಗಳು ನಿರ್ವಹಣೆಯಾಗುತ್ತಿರುವುದು ಸಾಸಿವೆ ಕೃಷಿ ಮೂಲದಿಂದ. ಕುಲಾಂತರಿ ಸಾಸಿವೆಯಿಂದ ಜೇನು ಸಾಕಣೆ ಕುಸಿಯುತ್ತಿದೆ ಎನ್ನುವ ಆತಂಕ ವ್ಯಕ್ತವಾಗಿದೆ.

ನೈಸರ್ಗಿಕ ಕೃಷಿ ವ್ಯವಸ್ಥೆಗೆ ಕುಲಾಂತರಿ ಮಾರಕ. ಇದು ಕಳೆನಾಶಕ ಸಹಿಷ್ಣುವಾಗಿದ್ದು ಭಾರತದ ಕೃಷಿಗೆ ಮರಣ ಶಾಸನವಾಗಿದೆ. ಕಳೆನಾಶಕದಲ್ಲಿ ಕ್ಯಾನ್ಸರ್ ಕಾರಕ ಅಂಶಗಳಿದ್ದು, ಗ್ರಾಮೀಣ ಭಾಗದ ಕೃಷಿಕರು, ಕಾರ್ಮಿಕರು ಅನಾರೋಗ್ಯಕ್ಕೆ ತುತ್ತಾಗುವ ಆಪಾಯವಿದೆ. ಜೇನು ಸಾಕಣೆ ಸೇರಿದಂತೆ ಕೃಷಿ ಹಾಗೂ ಕೃಷಿ ಉಪ ಕಸುಬುಗಳ ಮೇಲೆ ಆಪಾಯಕಾರಿಯಾಗಿದೆ.

-ಡಾ.ಮಂಜುನಾಥ್ ಕೃಷಿ ವಿಜ್ಞಾನಿ,
ಗಾಂಧಿ ಸಹಜ ಬೇಸಾಯ ಶಾಲೆ, ತುಮಕೂರು

Vijaya
Karnataka
Pg.03

Indian Express Pg.05

Tomato price down to ₹6-16 per kg at Kolar market

V VELAYUDHAM @Kolar

AFTER a roller-coaster ride of almost two months with tomato prices reaching over Rs 150 per kg, farmers last week had to sell the vegetable for far less at the Kolar APMC market, considered the second-biggest trading floor for tomatoes in Asia.

The prices fell drastically as the arrival of fresh produce caused a glut, while the demand in North India and also Andhra Pradesh dropped in the last couple of weeks.

In the first week of July, a crate containing 15 kg of tomatoes was sold at a whopping Rs 2,400, but now, it has come down to Rs 100-240 (Rs 6-16 per kg).

Deputy Director of Horticulture Kumaraswamy told The New Indian Express that the arrival of tomatoes has increased in the district. The area under tomato cultivation at present is 8,000 hectares, while another 6,000 hectares are being covered, he added.

APMC Secretary Vijaya Lakshmi said the market was getting 60,000 to 70,000 boxes per day two months ago, but on



Sunday, it received 1,18,974 boxes, and each crate was sold at Rs 100-240.

Sudharshan, a young farmer from Srinivasapura, said that because of the deficit in rain and scorching heat, tomatoes would not last even four to five days, and traders were not interested. But with good rain, the crops are standing fore nearly a week. This also is one of the reasons for the fall in prices, he added.

Another farmer Murali said that even at the peak price, the majority of farmers did not benefit as their crop was affected by leaf curl and white fly diseases, damaging nearly 50 per cent of their crops.

Samyuktha Karnataka Pg.07

ಟೊಮೇಟೊ ಬೆಲೆ ಪಾತಾಳಕ್ಕೆ

ಬೆಂಗಳೂರು: ಗಗನಕ್ಕೇರಿ ಆಪಲ್‌ಗಿಂತ ಹೆಚ್ಚು ಬೆಲೆ ದಾಖಲಿಸಿದ್ದ ಟೊಮೇಟೊ ಬೆಲೆ ಇದೀಗ ಪಾತಾಳಕ್ಕೆ ಕುಸಿದಿದೆ. ಒಂದು ತಿಂಗಳ ಹಿಂದೆ ಪ್ರತಿ ಕೆ.ಜಿ.ಗೆ 150 ರೂ. ದರ ನಿಗದಿಯಾಗಿ ಸಾಕಷ್ಟು ಬೇಡಿಕೆ ಗಿಟ್ಟಿಸಿಕೊಂಡಿದ್ದ ಟೊಮೇಟೊಗೆ ಈಗ ಬೇಡಿಕೆಯೇ ಇಲ್ಲವಾಗಿದೆ. ಇದರಿಂದ ಮಾರುಕಟ್ಟೆಗೆ ತಂದ ರೈತರು ತಮ್ಮ ಬೆಳೆ ಮಾರಾಟವಾಗದೆ ತಲೆ ಮೇಲೆ ಕೈಹೊತ್ತು ಕುಳಿತುಕೊಳ್ಳುವಂತಾಗಿದೆ.

ಈಗ ಟೊಮೇಟೊಗೆ ಬೇಡಿಕೆ ಇಲ್ಲದ ಕಾರಣ ಇದೀಗ ಬೆಳೆ ಬೆಳೆದ ರೈತರು ಅಕ್ಷರಶಃ ಬೀದಿಗೆ ಬಿದ್ದಿದ್ದಾರೆ. ಮಾರುಕಟ್ಟೆಯಲ್ಲಿ ಕೇಳುವವರಿಲ್ಲದ ಕಾರಣ ಟೊಮೇಟೊವನ್ನು ರಸ್ತೆಗೆ ಸುರಿಯುತ್ತಿದ್ದಾರೆ. ಇನ್ನು ಕೆಲವರು ಟೊಮೇಟೊವನ್ನು ಚೀಲದ ಸಮೇತ ಮಾರುಕಟ್ಟೆಯಲ್ಲೇ ಬಿಟ್ಟು ಹೋಗುತ್ತಿದ್ದಾರೆ.

- ಜೀವಿಗೆ ಜಿದ್ದ ರೈತರು
- 15 ಕೆಜಿ ಬಾಕ್ಸ್‌ಗೆ 100 ರೂ ನಿಗದಿ
- ಒಂದೂವರೆ ತಿಂಗಳ ಹಿಂದೆ 2500

ಟೊಮೇಟೊ, ಈರುಳ್ಳಿಯಂತಹ ತರಕಾರಿಗಳು ಕೆಲವೊಮ್ಮೆ ವಿರುಮುಖವಾಗಿ ನಂತರ ಕೇಳುವವರಿಲ್ಲದೆ ರಸ್ತೆಗೆ ಬರುತ್ತವೆ. ಇಂತಹ ಪರಿಸ್ಥಿತಿಗೆ ಕಾರಣವೇನು ಎಂಬ ಬಗ್ಗೆ ಕೇಂದ್ರ ಸರ್ಕಾರದ ಹಿರಿಯ ಅಧಿಕಾರಿ ದಳವಾಯಿ ಈ ಹಿಂದೆಯೇ ಮಾಹಿತಿ ನೀಡಿ, ರೈತರು ಬೆಲೆ ಸಿಗುತ್ತದೆ ಎಂದು ಖಾಸಗಿ ವ್ಯಾಪಾರಿಗಳಿಗೆ ಮಾರುತ್ತಾರೆ. ಇದರಿಂದ ಬೇಡಿಕೆ ಇದ್ದಾಗ ದಿಢೀರ್ ಎಂದು ಬೆಲೆ ಸಿಗುತ್ತದೆ. ಖಾಸಗಿಯವರ ಬೇಡಿಕೆ ಇಲ್ಲದಾಗ ಬೆಲೆ ಕುಸಿಯುತ್ತದೆ. ಇದರಲ್ಲಿಯೂ ವಿಶೇಷ ಎಂದರೆ, ಕಡಿಮೆ ಇಳುವರಿ ಬಂದಾಗಲೂ ಬೆಲೆ ಏರಿಕೆ ಇರುತ್ತದೆ. ಆದರೆ, ಇಷ್ಟರ ಪ್ರಮಾಣದಲ್ಲಿ ಇರುವುದಿಲ್ಲ. ಇಂತಹ ಬೆಲೆ ಏರಿಕೆಯನ್ನು ಖಾಸಗಿಯವರು ನಿರ್ಧರಿಸಬಿಡುತ್ತಾರೆ. ಇದರಿಂದ ರೈತರು ತಾತ್ಕಾಲಿಕವಾಗಿ ಆರ್ಥಿಕವಾಗಿ ಲಾಭ ಮಾಡಿಕೊಳ್ಳಬಹುದು. ನಂತರ ನಷ್ಟದ ಸ್ಥಿತಿ ಮುಂದುವರಿಯುತ್ತದೆ ಎಂದಿದ್ದಾರೆ.

ಅವರ ಪ್ರಕಾರ ದೇಶದ ಶೇ. 58ಕ್ಕಿಂತ ಹೆಚ್ಚು ರೈತರು ತಾವು ಬೆಳೆದ ಟೊಮೇಟೊವನ್ನು ಖಾಸಗಿ ವರ್ತಕರಿಗೆ ಮಾರಾಟ ಮಾಡುತ್ತಾರೆ. ಬೆಲೆ ಮೌಲ್ಯವರ್ಧನೆ ಮಾಡುವವರು ರೈತರಿಂದ ಕೊಳ್ಳುವುದಿಲ್ಲ. ಇನ್ನು ಸಹಕಾರಿ ಸಂಸ್ಥೆಗಳಾಗಲೀ ಅಥವಾ ಸರ್ಕಾರಗಳಾಗಲೀ ಈ ಬಗ್ಗೆ ಗಮನ ನೀಡುವುದಿಲ್ಲ. ಏಕೆಂದರೆ, ಟೊಮೇಟೊದಂತಹ ಬೆಳೆಗಳು ಶೀಘ್ರ ಹಾಳಾಗುವಂತಹವು. ಇವುಗಳನ್ನು ತ್ವರಿತವಾಗಿ ಮಾರಾಟ ಮಾಡಲೇಬೇಕಾದ ಅನಿವಾರ್ಯ. ಇದರಿಂದ ಬೆಲೆ ಸಿಕ್ಕಾಗ ಮಾರುತ್ತಾರೆ. ಮತ್ತೆ ಹೆಚ್ಚಿನ ಪ್ರಮಾಣದಲ್ಲಿ ಬೆಳೆದಾಗ ಬೆಲೆ ಸಿಗದೆ ಇದ್ದಾಗ ರಸ್ತೆಗೆ ಚೆಲ್ಲುತ್ತಾರೆ. ಆದರೆ, ಬೆಲೆ ಇದ್ದಾಗ, ಇಲ್ಲದೇ ಇದ್ದಾಗ ಖಾಸಗಿ ವರ್ತಕರು ಹೆಚ್ಚು ಲಾಭ ಮಾಡಿಕೊಳ್ಳುತ್ತಾರೆ.

10 ರೂ.ಗೆ ಮಾರಾಟ

ಪ್ರಸ್ತುತ ಟೊಮೇಟೊ ಬೆಲೆ ಪ್ರತಿ ಕೆ.ಜಿ.ಗೆ 10 ರೂ. ಆಗಿದೆ. ಸಗಟು ದರದಲ್ಲಿ 15 ಕೆ.ಜಿ. ಬಾಕ್ಸ್‌ಗೆ 100ರಿಂದ 110 ರೂ. ದರ ಇದೆ. ಇದೇ ತೂಕದ ಟೊಮೇಟೊ ಬಾಕ್ಸ್‌ಗಳಿಗೆ ಒಂದೂವರೆ ತಿಂಗಳ ಹಿಂದೆ 2500ರಿಂದ 2700 ರೂ.ವರೆಗೆ ಬೆಲೆ ಇತ್ತು.



ಈಗ ಬೆಲೆ ಪಾತಾಳಕ್ಕೆ ಕುಸಿದಿದೆ. ಜೂನ್ 27, 2023 ರಂದು ಟೊಮ್ಯಾಟೋ ಪ್ರತಿ ಕೆ.ಜಿಗೆ 122 ರೂವರೆಗೆ ಏರಿತ್ತು. ಇದೇ ಸಂದರ್ಭದಲ್ಲಿ ರೈತರು ಖಾಸಗಿ ವರ್ತಕರಿಗೆ ಕೆಜಿಯೊಂದಕ್ಕೆ 10 ರೂಪಾಯಿಗೆ ಮಾರಾಟ ಮಾಡಬೇಕಾದ ಅನಿವಾರ್ಯತೆಯೂ ಇತ್ತು. ಜನವರಿ-ಫೆಬ್ರವರಿಯಲ್ಲಿ 3 ರೂ.ಗೆ ಮಾರಾಟ ಮಾಡಿದ್ದೇವೆ ಎಂದು ರೈತರೇ ಹೇಳಿಕೊಂಡಿದ್ದಾರೆ.

ಶೀತಲ ಘಟಕವೇ ಇಲ್ಲ

ದಳವಾಯಿ ವರದಿ ಮತ್ತು ಶಿಫಾರಸ್ಸಿನ ಪ್ರಕಾರ ಕೋಲ್ಡ್ ಸ್ಟೋರೇಜ್, ಅತ್ಯಾಧುನಿಕ ಪ್ಯಾಕ್ ಹೌಸ್, ಸಂಗ್ರಹ ಕೇಂದ್ರಗಳು, ಸಾಗಾಣೆ ಮುಂತಾದ ಅಗತ್ಯ ಚಟುವಟಿಕೆಗಳಿಗೆ ಹೆಚ್ಚಿನ ಒತ್ತು ನೀಡಲಾಗಿಲ್ಲ. ಜೊತೆಗೆ ಪ್ರತಿ ಹಂಗಾಮಿನಲ್ಲಿ ಮಾರುಕಟ್ಟೆಗೆ ಅಗತ್ಯವಿರುವ ಟೊಮೇಟೊ ಪ್ರಮಾಣ, ಬೆಳೆಯ ಉತ್ಪಾದನೆ ಇತ್ಯಾದಿ ಅಂಶಗಳನ್ನು ಮೊದಲೇ ಅಂದಾಜು ಮಾಡಬಹುದಾದ ವ್ಯವಸ್ಥೆಯೂ ಜಾರಿಯಲ್ಲಿಲ್ಲ. ಹಾಗಾಗಿ ಮಾರುಕಟ್ಟೆಯಲ್ಲಿ ಬೆಲೆ ಏರುಪೇರಾಗುತ್ತಿದೆ. ಬೆಲೆ ಸ್ಥಿರವಾಗಿಸಲು ಅತ್ಯಾಧುನಿಕ ವ್ಯವಸ್ಥೆ ಮಾಡಬೇಕಾದ ಅನಿವಾರ್ಯತೆ ಇದೆ.

Vijaya Karnataka Pg.03

ಮಣ್ಣೇ ಜೀವ, ಮಣ್ಣೇ ದೈವ

ಸಕಲ ಜೀವಿಗಳಿಗೂ ಮಣ್ಣೇ ಆಧಾರ. ಮನುಷ್ಯರ ಪ್ರತಿಯೊಂದು ಆಗುಹೋಗುಗಳು ಮಣ್ಣಿನಿಂದಲೇ ಆಗುತ್ತಿವೆ. ದಿನನಿತ್ಯದ ಆಹಾರದ ಬಳಕೆಯೂ ಮಣ್ಣಿನಿಂದ. ಆದರೆ, ಎಲ್ಲರೂ ಕೃಷಿಕರಾಗಲು ಆಗಿಲ್ಲ, ವಿಭಿನ್ನ ಉದ್ಯೋಗಗಳಿರುವ ನಮ್ಮ ಮತ್ತು ಇತರೆ ದೇಶಗಳಲ್ಲಿ ಕೃಷಿಕರ ಪಾತ್ರ ಹಿರಿದು. ಒಂದು ರೀತಿಯಲ್ಲಿ ನಮ್ಮ ಆರೋಗ್ಯ, ಅಂತಸ್ತು ಎಲ್ಲವೂ ಮಣ್ಣಿನ ಮೇಲೆ ಅವಲಂಬನೆಯಾಗಿದೆ. ನಾವು ಅಂತ್ಯ ಆಗುವವರೆಗೂ ಆರೋಗ್ಯ ಉತ್ತಮವಾಗಿದ್ದರೆ ಅದೇ ದೊಡ್ಡ ಭಾಗ್ಯ. ಆಧ್ಯಾತ್ಮ, ಆಸ್ತಿ, ಆಟದ ಅಂಗಳ ಇತ್ಯಾದಿಗಳಿಗಿಂತ ಅನ್ನದಂಗಳ ಅಂದರೆ ಬೆಳೆ ಬೆಳೆಯುವ ಜಮೀನುಗಳು ಬಹು ಪ್ರಮುಖ ಎಂದೇ ಹೇಳಬಹುದು.

ನಾವು ನಿತ್ಯವೂ ಏನೆಲ್ಲಾ ಆಹಾರ ಧಾನ್ಯಗಳನ್ನು, ಹಣ್ಣು ಹಂಪಲುಗಳನ್ನು, ತರಕಾರಿಗಳನ್ನು ಬಳಸಿಕೊಳ್ಳುತ್ತೇವೆ. ಇವುಗಳಲ್ಲಿ ಒಳ್ಳೆಯ ಸತ್ವಾಂಶಗಳು ಸೇರಿಕೊಂಡಾಗ ಪ್ರತಿಯೊಬ್ಬರ ಆರೋಗ್ಯ ಉತ್ತಮವಾಗಿ ಇದ್ದೇ ಇರುತ್ತದೆ ಎಂಬುದು ಅನುಭವಗಳ ನುಡಿ. ಇದರಂತೆ ವ್ಯಕ್ತಿಗಳ ಸಾಮರ್ಥ್ಯ, ಗುಣ- ಇವು ಸಹ ಆಹಾರದಲ್ಲಿರುವ ಸತ್ವಾಂಶಗಳ ಮೇಲೆ ಅವಲಂಬನೆ ಆಗಿವೆ ಎಂದು ಹೇಳೋದಿದೆ. ಹಾಗೆಯೇ ರಾಸಾಯನಿಕ ರಹಿತ, ವಿಷರಹಿತ ಪದಾರ್ಥಗಳು ಆಹಾರದ ಮೂಲಗಳಲ್ಲಿ ಸೇರ್ಪಡೆ ಆಗದಿದ್ದರೆ ಆರೋಗ್ಯದ ಮೇಲೆ ಉತ್ತಮ ಪರಿಣಾಮ ಬೀರುವುದಿದೆ. ಈ ವಿಚಾರಗಳಿಗೆ ಸಂಬಂಧಿಸಿದಂತೆ ನೋಡೋದಾದರೆ, ಮಣ್ಣಿನ ಫಲವತ್ತತೆ ಬಹು ಮುಖ್ಯವಾದ ಸಂಗತಿ ಎನ್ನಿಸುತ್ತದೆ.



ರೈತಗಾಥೆ
ಡಾ. ವಿಜಯ್ ಅಂಗಡಿ

ಮಣ್ಣಿನ ಸಾವಯವದ ಅಂಶ, ಮಣ್ಣಿನ ರಸ ಸಾರ, ಅಲ್ಲಿರುವ ಸೂಕ್ಷ್ಮಜೀವಿಗಳು, ಲಘು ಪೋಷಕಾಂಶಗಳು- ಇವೆಲ್ಲ ಹಿತವಾಗಿದ್ದರೆ ನಮ್ಮೆಲ್ಲರ ಜೀವನವು ಹಿತವಾಗಿರುತ್ತದೆ. ಹಾಗೆಯೇ ಪ್ರಾಣಿ, ಪಕ್ಷಿ, ಸೂಕ್ಷ್ಮಜೀವಿ ಇತ್ಯಾದಿಗಳೂ ಸುರಕ್ಷಿತವಾಗಿರುತ್ತವೆ. ಆದರೆ, ಇಂದಿನ ದಿನಗಳಲ್ಲಿ ಕೆಲವಾರು ಕಾರಣಗಳಿಂದ ರೈತರು ಜಾನುವಾರುಗಳ ಸಾಕಾಣಿಕೆಯನ್ನು ಕಡಿಮೆ ಮಾಡಿಕೊಂಡಿದ್ದಾರೆ. ಇದರಿಂದ ದೊರೆಯುವ ಸಾವಯವ ಪದಾರ್ಥವು ಕಡಿಮೆಯಾಗಿದೆ. ಸಹಜವಾಗಿ ಮಣ್ಣಿನ ಮೇಲೆ ಮತ್ತು ಮನುಷ್ಯರ ಮೇಲೆ ಪರಿಣಾಮಗಳು ಕಾಣಿಸುತ್ತಿವೆ. ಸಾವಯವ ಇಂಗಾಲ ಎಂಬುದು ಮಣ್ಣಿನ ಆರೋಗ್ಯಕರ ಲಕ್ಷಣ ನಿರ್ಧರಿಸುವಲ್ಲಿ ಪ್ರಮುಖವಾದ ಘಟಕವಾಗುತ್ತದೆ. ಈ ಹಿಂದೆಲ್ಲ ಶೇ.3ರಿಂದ 7ರ ತನಕ ಇತ್ತು ಎಂದು ನಾವೆಲ್ಲ ಕೇಳಲ್ಪಟ್ಟಿದ್ದೇವೆ. ಆದರೆ, ಪ್ರಸ್ತುತ ಮಣ್ಣಿನ ಸಾವಯವ ಇಂಗಾಲದ ಪ್ರಮಾಣ ಬಹುತೇಕ ಭಾಗಗಳಲ್ಲಿ ಒಂದನ್ನೂ ಮೀರಿಲ್ಲ. ನಾನಾ ಕಾರಣಗಳಿಂದ ಈ ಪರಿಸ್ಥಿತಿ ನಿರ್ಮಾಣವಾಗಿದೆ. ಮುಂದೆ ಇನ್ನಷ್ಟು ಪರಿಸ್ಥಿತಿ ಕೆಡುವುದಕ್ಕಿಂತ ಮುಂಚಿತವಾಗಿ ಎಚ್ಚೆತ್ತುಕೊಂಡು ಕೆಲಸಗಳನ್ನು ಕೈಗೊಂಡರೆ ಸುಧಾರಣೆಗಳನ್ನು ಕೆಲವೇ ವರ್ಷಗಳಲ್ಲಿ ಮಾಡಿಕೊಳ್ಳಬಹುದು.

ಇತಿಮಿತಿಗಳಲ್ಲೂ ಕನಿಷ್ಠ ಪ್ರಮಾಣದಲ್ಲಿ ರಾಸುಗಳನ್ನು ಸಾಕಿಕೊಳ್ಳುವುದು, ಹಸಿರೆಲೆ ಗೊಬ್ಬರದ ಬೆಳೆಗಳನ್ನು ಸಾಗುವಳಿ ಮಾಡುವುದು, ಕಳೆ, ಕಸ ಮತ್ತಿತರೆ ತ್ಯಾಜ್ಯವನ್ನು ಸದ್ಬಳಕೆ ಮಾಡಿಕೊಳ್ಳುವುದು- ಇವು ಮಣ್ಣಿನ ಫಲವತ್ತತೆಯ ಸುಧಾರಣೆಗೆ ಖಂಡಿತವಾಗಿಯೂ ನೆರವಾಗಬಲ್ಲವು. ಹೆಸರು, ಅಲಸಂದೆ, ಉದ್ದು, ಶೇಂಗಾ, ಹರಳು, ಅವ್ಲಕ್ಕಿ, ಡಯಾಂಚ್, ಇತ್ಯಾದಿ ಬೆಳೆಗಳನ್ನು ಆಗಾಗ್ಗೆ ಆಸಕ್ತಿಯಿಂದ ಸಾಗುವಳಿ ಮಾಡುವ ಕ್ರಮಗಳು ತುಂಬಾ ನೆರವಿಗೆ ಬರಬಲ್ಲವು. ಎಕರೆಗೆ ಒಮ್ಮೊಮ್ಮೆ 20ರಿಂದ 25 ಟನ್‌ವರೆಗೂ ಈ ಬೆಳೆಗಳು ಸಾವಯವದ ಅಂಶವನ್ನು ಮಣ್ಣಿಗೆ ನೀಡಬಲ್ಲವು. ಹಾಗೆಯೇ ಇತರೆ ಪೋಷಕಾಂಶಗಳನ್ನು ಪೂರೈಸಬಲ್ಲವು. ಕೆಲವೊಮ್ಮೆ ಇತರೆ ಬೆಳೆಗಳೊಂದಿಗೆ ಈ ರೀತಿಯ ಬೆಳೆಗಳನ್ನು ಸೇರಿಸಿಕೊಂಡರೂ ಅನುಕೂಲವಾಗುತ್ತದೆ. ಎಳೆ ಹಂತದಲ್ಲಿಯೂ, ಬಲಿತು ಫಲ ನೀಡಿದ ಬಳಕವೂ ಈ ಬೆಳೆಗಳು ಮಣ್ಣಿನ ಫಲವತ್ತತೆಯನ್ನು ಸುಧಾರಣೆ ಮಾಡಬಲ್ಲವು. ಮಣ್ಣಿನಲ್ಲಿರುವ ಎರೆಹುಳುಗಳು, ಸೂಕ್ಷ್ಮಜೀವಿಗಳು ಮತ್ತು ಇತರೆ ಉಪಕಾರಿ ಕೆಲಸಗಳನ್ನು ಮಾಡುವ ಜೀವಿಗಳಿಗೆ ಬೇಕಾಗಿರುವ ವಾತಾವರಣವನ್ನು ಸೃಷ್ಟಿ ಮಾಡುವ ನಿಟ್ಟಿನಲ್ಲಿ ಕೃಷಿಕರು ಸದಾ ಗಮನಹರಿಸುತ್ತಾ ಹೋದಲ್ಲಿ ಬದುಕು ಚೆಂದವಾಗಿರುತ್ತದೆ, ಇತರರ ಜೀವನವು ಆರೋಗ್ಯಕರವಾಗಿರುತ್ತದೆ.

ಮಣ್ಣಿನಲ್ಲಿ ಸದಾ ಜೀವ ಇರುವಂತೆ, ಜೀವಿಗಳಿರುವಂತೆ ಕಾಯಕ ಮಾಡುವುದು ಅರ್ಥಪೂರ್ಣವಾದದ್ದು, ಈ ಕಾಯಕವೇ ಪೂಜನೀಯವಾದದ್ದು, ಸಾವಯವ ಪದಾರ್ಥವನ್ನು ಏರಿದಿ ಮಾಡುವುದು, ರಾಸಾಯನಿಕ ಗೊಬ್ಬರಗಳನ್ನು, ವಿಷಗಳನ್ನು ಬಳಕೆ ಮಾಡುವುದು ಒಂದು ರೀತಿಯಲ್ಲಿ ವೆಚ್ಚದಾಯಕ, ಹೊರದಾಯಕ ಹಾಗೂ ಅಪಾಯಗಳನ್ನು ಉಂಟುಮಾಡುತ್ತದೆ. ಕಡಿಮೆ ಖರ್ಚಿನ, ಸ್ವಯಂಯವಾಗಿಯೇ ಉತ್ತಮ ಪರಿಣಾಮಗಳನ್ನು ಸೃಷ್ಟಿ ಮಾಡಬಹುದಾದಂಥ ಕ್ರಮಗಳು ಎಂದಿಗೂ ಅನುಕೂಲಕರ ಮತ್ತು ಹಗುರ.

(ಕೃಷಿ ತಜ್ಞರು ಮತ್ತು ಕಾರ್ಯಕ್ರಮ ನಿರ್ವಾಹಕರು, ಆಕಾಶವಾಣಿ, ಹಾಸನ)